ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ
(ಆರ್ ಪಿ ಸಂಖ್ಯೆ57)
ನಮೂನೆ ಸಂಖ್ಯೆ4

ಸಿ ಆರ್ ಪಿ 67

<u>ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಿಂಧನೂರು</u>

<u>CC No.715/2021 CW-5 PW-3</u>

| | | |
|---|---|---|
| ಹೆಸರು | : | ವಿರೇಶ ಹುಗಾರ |
| ತಂದೆಯ/ಗಂಡನ ಹೆಸರು | : | ಬಸವರಾಜಪ್ಪ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಶೋ ರೂಮ್ ನಲ್ಲಿ ಕೆಲಸ |
| ವಾಸಸ್ಥಳ | : | ಸಿಂಧನೂರು |

ಸಾಕ್ಷಿಗೆ ಪ್ರಮಾಣ ವಚನ ಬೋದಿಸಿದ ದಿನಾಂಕಃ 10-01-2023

<u>ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದ</u>

ಚಾಸಾ-1 ನನ್ನ ತಂಗಿ, ಚಾಸಾ-2 ನನ್ನ ತಂದೆ, ಚಾಸಾ-3 ನನ್ನ ತಾಯಿ, ಚಾಸಾ-4 ನನ್ನ ಸೋದರ ಮಾವ, ಚಾಸಾ-6 ನನ್ನ ಅಕ್ಕ. ಚಾಸಾ-7 ರಿಂದ 12 ರವರ ಪರಿಚಯ ಇದೆ. 1 ನೇ ಆರೋಪಿ ನನ್ನ ತಂಗಿಯ ಗಂಡ, ಉಳಿದ ಆರೋಪಿತರ ಪರಿಚಯ ಇದೆ.

ದಿಃ 15-02-2019 ರಂದು ಚಾಸಾ-1 ರವರ ಮದುವೆಯನ್ನು 1 ನೇ ಆರೋಪಿಗೆ ಕೊಟ್ಟು ಮಾನವಿಯ ಕಲ್ಮಠ ಜ್ಞಾನ ಮಂದಿರದಲ್ಲಿ ಮದುವೆ ಮಾಡಿಕೊಟ್ಟಿದ್ದೇವೆ. ಮದುವೆ ಮಾತುಕತೆಗೆ ನಾವು, ಚಾಸಾ-2 ರಿಂದ 4 ಮತ್ತು ಆರೋಪಿತರ ಕಡೆಯಿಂದ ಆರೋಪಿತರು ಬಂದಿದ್ದರು. ಆರೋಪಿತರು 13 ತೊಲೆ ಬಂಗಾರ, 2 ಕೆಜಿ ಬೆಳ್ಳಿ, 5 ಲಕ್ಷ ನಗದು ಹಣ ಮತ್ತು ಗ್ರಹ ಉಪಯೋಗಿ ಸಾಮಾನುಗಳನ್ನು ವರದಕ್ಷಿಣೆ ಕೇಳಿದ್ದರು. ಅಷ್ಟು ಕೊಡಲು ಆಗುವುದಿಲ್ಲ ಎಂದು ನಾವು, ಚಾಸಾ-1 ರವರ ಜೀವನದ ಹಿತದೃಷ್ಟಿಯಿಂದ 10 ತೊಲೆ ಬಂಗಾರ, 1 ಕೆಜಿ ಬೆಳ್ಳಿ, 1 ಲಕ್ಷ ನಗದು ಹಣ ಮತ್ತು ಮನೆಬಳಕೆ ಸಾಮಾನುಗಳನ್ನು ಕೊಟ್ಟಿದ್ದೇವೆ. ಮದುವೆಯಾದ ನಂತರ ಚಾಸಾ-1 ರವರನ್ನು ಆರೋಪಿತರು ಕರೆದುಕೊಂಡು ಹೋದರು. ಚಾಸಾ-1 ರವರು ಗಂಡನ ಮನೆಯಲ್ಲಿ ಚೆನ್ನಾಗಿ ಇದ್ದಳು. ಎರಡು ತಿಂಗಳ ನಂತರ ನಾನು ಚಾಸಾ-1 ರವರನ್ನು ನಮ್ಮ ಮನೆಗೆ ಕರೆದುಕೊಂಡು ಬರಲು ಹೋದಾಗ ಆಕೆಗೆ ಆರೋಪಿತರು ನೀನು ದರಿದ್ರದವಳು, ನಿನ್ನ ಹಸ್ತ ರೇಖೆ ಸರಿಯಿಲ್ಲ, ನಿನಗೆ ಅಡುಗೆ ಮಾಡಲು ಬರುವುದಿಲ್ಲ, ನೀನು ಮಾಡಿದ ಅಡುಗೆ ತಿಂದರೆ ನಾವು ಹೊಲಸು ತಿಂದಂತೆ ಆಗುತ್ತದೆ. ಆ ದೊಡ್ಡ ಮನೆಯಲ್ಲಿ 5 ನಿಮಿಷದಲ್ಲಿ ಸ್ವಚ್ಚ ಮಾಡಬೇಕು ಎಂದು ಕೆಲಸ ನೀಡಿ ಕಿರುಕುಳ ನೀಡುತ್ತಿದ್ದರು.

ದೇವಸ್ಥಾನಕ್ಕೆ ಹೋಗಬೇಕಾದರೆ ನೀನು ಸುಂದರವಾಗಿದ್ದೀಯಾ, ಬೆಳಗ್ಗೆ 3-00 ಗಂಟೆಗೆ ಹೋಗಬೇಕು ಎಂದು ಹೇಳುತ್ತಿದ್ದರು. ಚಾಸಾ-1 ರವರಿಗೆ ಹುಷಾರಿಲ್ಲದಾಗ ಆಕೆಯನ್ನು ಕರೆದುಕೊಂಡು ಬಂದು ಬಳ್ಳಾರಿಯ ಆದರ್ಶ ಆಸ್ಪತ್ರೆಯಲ್ಲಿ 5 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದರು. ಆಗ ಆರೋಪಿತರು ಯಾರು ಕೂಡಾ ಬಂದು ನೋಡಿರುವುದಿಲ್ಲ. ಆದರೆ ಒಂದು ಸಾರಿ 2 ನೇ ಆರೋಪಿ ಬಂದು ಹೋಗಿದ್ದ.

ದಿಃ 18-12-2019 ರಂದು ಚಾಸಾ-4 ರವರು ನಮ್ಮ ಮನೆಗೆ ಬಂದಿದ್ದರು. ಆಗ ಚಾಸಾ-2 ರಿಂದ 4 ಮತ್ತು 6 ರವರು ಚಾಸಾ-1 ರವರ ಬಗ್ಗೆ ಮಾತನಾಡುತ್ತಾ ಕುಳಿತಿದ್ದರು. ಆಗ ಆರೋಪಿತರೆಲ್ಲರೂ ಬಂದರು. ಆಗ ನಾನು ಮತ್ತು ಚಾಸಾ-7 ರವರು ನಮ್ಮ ಮನೆ ಹೊರಗಡೆ ನಿಂತಿದ್ದೆವು. ಆಗ ಆರೋಪಿತರೆಲ್ಲರೂ ನಮ್ಮ ಮನೆಯಲ್ಲಿ ನುಗ್ಗಿ, ನಮ್ಮ ತಂಗಿಯನ್ನು ಎಳೆದು, ಚಾಸಾ-1 ರವರ ಕಪಾಳಿಗೆ ಹೊಡೆದು, ಬೆನ್ನಿಗೆ ಗುದ್ದಿದನು. 1 ನೇ ಆರೋಪಿಯು ಚಾಸಾ-1 ರವರಿಗೆ ಏನಲೇ ನಿನಗೆ 5 ಲಕ್ಷ ಹಣ ತೆಗೆದುಕೊಂಡು ಬಾ ಎಂದು ಹೇಳಿದರೆ ನೀನು ಮಹಾರಾಣಿ ತರ ಕುಳಿತಿದ್ದೀಯಾ ಎಂದು ಅವಾಚ್ಯವಾಗಿ ಬೈದನು. ಆಗ 2 ನೇ ಆರೋಪಿಯು ಚಾಸಾ-1 ರವರ ಕೈ ಮತ್ತು ಸೀರೆ ಹಿಡಿದು ಹೊರಗೆ ಎಳೆದುಕೊಂಡು ಬಂದನು. 3 ನೇ ಆರೋಪಿಯು ಸಹ ಚಾಸಾ-1 ರವರನ್ನು ಎಳೆದಾಡುತ್ತಿದ್ದಳು. ನಂತರ ನಾನು ಮತ್ತು ಚಾಸಾ-7 ರವರು ಗಲಾಟೆ ಬಿಡಿಸಿಕೊಂಡೆವು. ಆಗ ಆರೋಪಿತರು ಹೆಚ್ಚಿನ ವರದಕ್ಷಿಣೆ ತರದಿದ್ದರೇ ನಿನ್ನನ್ನು ಮುಗಿಸುತ್ತೇವೆ ಎಂದು ಬೆದರಿಕೆ ಹಾಕಿ ಹೋದರು. ನಾವು ಆರೋಪಿತರ ಮೇಲೆ ಪ್ರಕರಣ ದಾಖಲಿಸಬೇಕು ಎನ್ನುವಷ್ಟರಲ್ಲಿ ದಿಃ 01-01-2020 ರಂದು ಆರೋಪಿತರು ಈ ತರಹ ಮುಂದೆ ಮಾಡುವುದಿಲ್ಲ ಎಂದು ಹೇಳಿ ಚಾಸಾ-1 ರವರನ್ನು ಕರೆದುಕೊಂಡು ಹೋದರು. ಅದೇರೀತಿ ದಿಃ 22-02-2020 ರಂದು ಪುನಃ ಆರೋಪಿತರು ಚಾಸಾ-1 ರವರಿಗೆ ಕಿರುಕುಳ ನೀಡಲು ಪ್ರಾರಂಭಿಸಿದರು. 4 ನೇ ಆರೋಪಿಯು ಚಾಸಾ-1 ರವರಿಗೆ ನಿಂದಿಸುವುದು, ಅಡುಗೆ ಸರಿಯಾಗಿ ಮಾಡುವುದಿಲ್ಲ ಎಂದು ಕಿರುಕುಳ ನೀಡುತ್ತಿದ್ದಳು. ಆರೋಪಿತರು ಚಾಸಾ-1 ರವರಿಗೆ ಟಿವಿ ನೋಡಲು ಬಿಡುತ್ತಿರಲಿಲ್ಲ, ಎಸಿ ಇರುವುದನ್ನು ಬಂದ ಮಾಡುತ್ತಿದ್ದರು. ಆ ನಂತರ ನಾವು ಚಾಸಾ-1 ರವರನ್ನು ನಮ್ಮ ಮನೆಗೆ ಕರೆದುಕೊಂಡು ಬಂದೆವು. ಈ ಬಗ್ಗೆ ಪೋಲೀಸರಿಗೆ ನಾನು ಹೇಳಿಕೆ ನೀಡಿದ್ದೇನೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ</u>

ಆರೋಪಿ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯ ಕೋರಿದ್ದು ಮುಂದೂಡಲಾಯಿತು.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.